**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:189/2014** **ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕಃ **14.07.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಪ್ರತಿವಾದಿಗಳ ಪರ ಶ್ರೀ **ಜಿ.ಆರ್.ಎಸ್** ವಕೀಲರಿಂದಃ

ದಾವಾ ಆಸ್ತಿಯ ವಿಸ್ತೀರ್ಣ ಉತ್ತರ-ದಕ್ಷಿಣ 27 ಅಡಿ ಹಾಗೂ ಪೂರ್ವ-ಪಶ್ಚಿಮ 13 ½ ಅಡಿ ಇರುತ್ತದೆ. ದಾವಾ ಆಸ್ತಿ ಹಾಗೂ ವಾದಿಗೆ ಸೇರಿದ ಆಸ್ತಿ ಒಟ್ಟಾಗಿ 4 ಕಂಬದ ತೊಟ್ಟಿ ಮನೆ ಇರುತ್ತದೆ ಎಂದರೆ ಸರಿ. ಸದರಿ 4 ಕಂಬದ ತೊಟ್ಟಿ ಮನೆಯಲ್ಲಿ ನನ್ನ ಅತ್ತೆಯ ಮೈದುನರವರಿಗೆ ಅರ್ಧ ಭಾಗ ಹೋಗಿರುತ್ತದೆ ಎಂದರೆ ಸರಿ. ನಾನು ಈಗ ಇರುವ ಉತ್ತರ-ದಕ್ಷಿಣ 27 ಅಡಿ ಹಾಗೂ ಪೂರ್ವ-ಪಶ್ಚಿಮ 13 ½ ಅಡಿ ಜಾಗ ಈಗಲೂ ಹಾಗೇ ಇರುತ್ತದೆ ಎಂದರೆ ಸಾಕ್ಷಿ ಸದರಿ ಜಾಗದಲ್ಲಿ ಗೋಡೆಯನ್ನು ಪ್ರತಿವಾದಿಗಳು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಗೋಡೆಯಿಂದ ನನಗೆ ಪೂರ್ವ-ಪಶ್ಚಿಮ 13 ½ ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಒಟ್ಟು ಆಸ್ತಿ 27 ಅಡಿ **X** 27 ಅಡಿಯಲ್ಲಿ ವಾದಿಗೆ ಹಾಗೂ ನನ್ನ ಅತ್ತೆಯ ಮೈದುನರವರಿಗೆ ತಲಾ ಅರ್ಧ ಭಾಗ ಅಂದರೆ 27 ಅಡಿ **X** 13 ½ ಅಡಿ ಮಾಡಿ ಮದ್ಯದಲ್ಲಿ ಗೋಡೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿಗೋಡೆ 1 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಗೋಡೆ ಇಬ್ಬರಿಗೂ ಸೇರಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಅವರ ಭಾಗಕ್ಕೆ ಬಂದ ಮನೆಯ ಹಂಚುಗಳನ್ನು ತೆಗೆದು ಕೆಡವಿರುತ್ತಾರೆ ಎಂದರೆ ಸರಿ. ಸದರಿ ಇಬ್ಬರಿಗೂ ಸೇರಿದ ಗೋಡೆಗೆ ಪ್ರತಿವಾದಿಗಳು ಪಾಯ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ನಮ್ಮ ಜಾಗದಲ್ಲಿ ಪಾಯ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಇಬ್ಬರಿಗೂ ಸೇರಿದ ಮದ್ಯದ ಗೋಡೆಯಲ್ಲಿ ಮಾತ್ರ ಪಾಯ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ಪಂಚಾಯತಿ ತೀರ್ಮಾನ ಮಾಡಿರುತ್ತೇವೆ. ಸದರಿ ಪಂಚಾಯತಿಯ ಸಮಯದಲ್ಲಿ ನನ್ನ ಅತ್ತೆ ಮಾಯಮ್ಮ ಬದುಕಿದ್ದರು ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ಮಾಯಮ್ಮ ಮತ್ತು ಪ್ರತಿವಾದಿಗಳ ನಡುವೆ ಒಪ್ಪಂದದ ತೀರ್ಮಾನ

ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯ ಒಪ್ಪಂದದ ತೀರ್ಮಾನದಂತೆ ಈಗ ಇರುವ ಮದ್ಯದ ಗೋಡೆಯ ಪಾಯದಜಾಗದಲ್ಲಿ ಗೋಡೆಯನ್ನು ಕಟ್ಟಬೇಕು ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯ ತೀರ್ಮಾನದಂತೆ ಮುಂದಿನ ದಿನಗಳಲ್ಲಿ ದಾವಾ ಆಸ್ತಿಯನ್ನು ಒಡೆದು ಹೊಸ ಮನೆ ಕಟ್ಟುವ ಸಮಯದಲ್ಲಿ ಪ್ರತಿವಾದಿಗಳು ನಿರ್ಮಿಸುವ ಮದ್ಯದ ಗೋಡೆಯ ಸಹಾಯದಿಂದ ಕಟ್ಟಬಹುದಾಗಿರುತ್ತದೆ ಎಂದು ಒಪ್ಪಂದ ಆಗಿರುತ್ತದೆ ಎಂದರೆ ಸರಿ.

ಪ್ರತಿವಾದಿಗಳು ನೆಲಮಹಡಿಯ ಮೇಲ್ಛಾವಣಿಗೆ ವಾದಿಗೆ ಅನುಕೂಲವಾಗುವಂತೆ ಎರಡು ಅಡಿಗಳ ಕಬ್ಬಿಣದ ಸರಳುಗಳನ್ನು ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಮೊದಲು ಸರಳುಗಳನ್ನು ಬಿಟ್ಟಿರಲಿಲ್ಲ, ನಂತರ ಗೋಡೆಗಳಿಗೆ ಸರಳುಗಳನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು, ಸದರಿ ಪೋಟೋದಲ್ಲಿರುವ ಕೆಳ ಅಂತಸ್ತಿನ ಚಾವಣಿಗೆ ಪ್ರತಿವಾದಿಗಳು ಎರಡು ಅಡಿ ಉದ್ದದ ಸರಳುಗಳನ್ನು ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಮೊದಲು ಸರಳುಗಳನ್ನು ಬಿಟ್ಟಿರಲಿಲ್ಲ, ನಂತರ ಗೋಡೆಗಳನ್ನು ಕೊರೆದು ಸರಳುಗಳನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ಪ್ರತಿವಾದಿಗಳ ಪರವಾಗಿ **ನಿಡಿ-1** ಎಂದು ಗುರುತಿಸಲಾಯಿತು. ನಿಪಿ-12 ರಲ್ಲಿ ನನ್ನ ದಾವಾ ಮನೆಯ ಜಂತಿ ಪ್ರತಿವಾದಿಯ ಮನೆಗೆ ಅಳವಡಿಸಿರುತ್ತಾರೆ ಎಂದರೆ ಸರಿ.

ಪ್ರತಿವಾದಿಗಳ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಖಾಲಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪುರಸಭೆಯ ಮುಖ್ಯಾಧಿಕಾರಿಗಳಿಗೆ ದೂರು ನೀಡಿದ್ದು, ಸದರಿಯವರು ಬಂದು ಸ್ಥಳ ಪರಿಶೀಲನೆ ಮಾಡಿ ಹಿಂಬರಹ ನೀಡಿರುತ್ತಾರೆ ಎಂದು ನುಡಿದಿದ್ದು, ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿಯವರು ಸ್ಥಳಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಪುರಸಭೆಯ ಮುಖ್ಯಾಧಿಕಾರಿಯವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದು, ಪ್ರತಿವಾದಿಗಳು ತಮ್ಮ ಆಸ್ತಿಯಲ್ಲಿ ಗೋಡೆ ಕಟ್ಟುತ್ತಿದ್ದ ಕಾರಣ ಸದರಿಯವರು ಕಾಮಗಾರಿಯನ್ನು ಮುಂದುವರೆಸಲು ಅನುಮತಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 23.10.2013 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಮನೆ ಕಟ್ಟುವ ಬಗ್ಗೆ ಪಂಚಾಯತಿಯ ಒಪ್ಪಂದ ಆಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಪಾಯ ತೆಗೆದ ನಂತರ ಪ್ರತಿವಾದಿಗಳು ಒತ್ತುವರಿ ಮಾಡಿ ಗೋಡೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಒಪ್ಪಂದಕ್ಕೆ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಒಪ್ಪಂದಕ್ಕೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಒಪ್ಪಂದದ ಪ್ರಕಾರ ಪ್ರತಿವಾದಿಗಳು ಮದ್ಯದ ಗೋಡೆಯನ್ನು ನಿರ್ಮಿಸುವುದು ಎಂದು ಮತ್ತು ನಾನು ಸದರಿಯವರಿಗೆ ರೂ.10,000/- ಹಣವನ್ನು plastering ಗಾಗಿ ನೀಡಬೇಕೆಂದು ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಹಣವನ್ನು ಪ್ರತಿವಾದಿಗಳಿಗೆ ನೀಡಬೇಕಾಗುತ್ತದೆ ಎಂದು ಅವರೊಂದಿಗೆ ಜಗಳ ತೆಗೆದು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರತಿವಾದಿಗಳು ಹಣ ಕೊಡುವುದು ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದ್ದರೂ ಸಹ ನಾನು ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 03.02.1993 ರ ವಿಭಾಗ ಪತ್ರದ ಪೂರ್ಣ ಅಂಶಗಳು ನನಗೆ ಗೊತ್ತಿರುವುದಿಲ್ಲ. ಪುರಸಭೆಯ ಮುಖ್ಯಾಧಿಕಾರಿಗಳು ಬಂದು ಮನೆ ಕಟ್ಟುವ ಕಾಮಗಾರಿಯನ್ನು ನಿಲ್ಲಿಸಲು ಹೇಳಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳು ನೆಲ ಮತ್ತು ಮೊದಲನೇ ಅಂತಸ್ತು ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ, ವಾಸವಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ವಾಸವಿದ್ದು, ಬಾಡಿಗೆಗೆ ಸಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿ ತೀರಿಕೊಂಡ ನಂತರ ನಾನು ಹಾಗೂ ನನ್ನ ಹೆಂಡತಿ ದಾವಾ ಆಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದಲ್ಲಿ ದಾವೆ ಚಾಲ್ತಿ ಇರುವ ಕಾರಣ ಖಾತೆ ವರ್ಗಾವಣೆ ಆಗಿರುವುದಿಲ್ಲ. ಅದಕ್ಕೆ ಸಂಬಂದಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳು ತಮ್ಮ ಜಾಗದಲ್ಲಿ ಮದ್ಯದ ಗೋಡೆಯ ಜಾಗದಲ್ಲಿ ಗೋಡೆಯನ್ನು ನಿರ್ಮಿಸಿದ್ದು ಯಾವುದೇ ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ದಿನಾಂಕ **23.10.2013** ರಂದು ಆದ ಒಪ್ಪಂದದ ಕರಾರಿನ ಪ್ರಕಾರ ಮನೆಯನ್ನು ನಿರ್ಮಿಸಿದ್ದು, ಯಾವುದೇ ಷರತ್ತು ಹಾಗೂ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಚೆನ್ನಾಗಿ ಮನೆಯನ್ನು ಕಟ್ಟಿಕೊಂಡು ಕಾರಣ ನಾನು ಅವರ ದ್ವೇಷದಿಂದ ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ನನ್ನ ಆಸ್ತಿ 27 ಅಡಿ **X** 13 **½** ಅಡಿ ಅಸ್ತಿತ್ವದಲ್ಲಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**